# منهج السلف الصالح
## وَحَاجَةُ الأُمَّةِ إِلَيْهِ

# ಸಲಫುಸ್ಸಾಲಿಹೀನ್‌ಗಳ ಮಾರ್ಗ

ಶೈಖ್ ಸಾಲಿಹ್ ಬಿನ್ ಫೌಝಾನ್ ಅಲ್-ಫೌಝಾನ್ ಹಫಿಝಹುಲ್ಲಾಹ್
ಕನ್ನಡ ಅನುವಾದ : ಮಖ್ಸೂದ್ ಅಹ್ಮದ್ ಉಮ್ರಿ ನಝೀರಿ

CIS Welfare Trust®
Bengaluru - 560 084
www.ciswt.in

# منهج السلف الصالح

## وحاجة الأمة إليه

# ಸಲಫುಸ್ಸಾಲಿಹೀನ್‌ಗಳ ಮಾರ್ಗ

ಶೈಖ್ ಸಾಲಿಹ್ ಬಿನ್ ಫೌಝಾನ್ ಅಲ್-ಫೌಝಾನ್ ಹಫಿಝುಹುಲ್ಲಾಹ್

*ಅನುವಾದ:*

ಮಖ್ಸೂದ್ ಅಹ್ಮದ್ ಉಮ್ರಿ ನಝೀರಿ

CIS Welfare Trust®

Bengaluru - 084 560

www.ciswt.in

ALL RIGHTS RESERVED © جميع الحقوق محفوظة
no part of this book may be reproduced or transmitted in any form or by any means, electronic, mechanical, including photocopy, recording, or any information storage and retrieval system, without permission in writing from the publisher

**1st Edition : Oct. 2021 / Rabi-ul-Awwal 1443**

| | | |
|---|---|---|
| Book Title | : | Salaf Saliheen gala Marga |
| Author | : | Shaykh Salih Bin Fawzan al-Fawzan |
| Translator | : | Shaykh Maqsood Ahmad Umri Nazeeri |
| Book Design | : | Image Digital, Puttur |
| Copies | : | 2000 |

**For Free Distribution Only - Not for Sale**
ಉಚಿತ ವಿತರಣೆಗಾಗಿ - ಮಾರಾಟ ಮಾಡಬಾರದು

Publishers

**CIS (Centre for Islamic Studies) Welfare Trust®**
First Floor, Masjid e Munawwara Complex
North Road, Cooke Town, Bengaluru - 560 084
☎ +91 80 2546 6926 ✉ cisblr@yahoo.co.in www.ciswt.in

بسم الله الرحمن الرحيم

# ಸಲಫುಸ್ಸಾಲಿಹೀನ್‌ಗಳ (ಸಜ್ಜನ ಪೂರ್ವಜರ) ಮಾರ್ಗ ಮತ್ತು ಸಮುದಾಯಕ್ಕೆ ಅದರ ಅವಶ್ಯಕತೆ

ಸರ್ವಲೋಕಗಳ ಪರಿಪಾಲಕನಾದ ಅಲ್ಲಾಹನಿಗೆ ಸರ್ವಸ್ತುತಿ. ಅವನ ಪೈಗಂಬರ್ ಮುಹಮ್ಮದ್ (ಸ) ಹಾಗೂ ಅವರ ಸಂಗಾತಿಗಳ ಮೇಲೆ ಶಾಂತಿ ಮತ್ತು ಕರುಣೆ ಸದಾ ವರ್ಷಿಸುತ್ತಿರಲಿ.

ನೀವು ತಿಳಿದಿರುವಂತೆ ಸಲಫುಸ್ಸಾಲಿಹೀನ್‌ಗಳ (ಸಜ್ಜನ ಪೂರ್ವಜರ) ಮಾರ್ಗ ಮತ್ತು ಸಮುದಾಯಕ್ಕೆ ಅದರ ಅವಶ್ಯಕತೆ ಎಂಬ ವಿಷಯವು ಅತ್ಯಂತ ಪ್ರಮುಖವಾಗಿದೆ. ಸಲಫುಸ್ಸಾಲಿಹೀನ್‌ಗಳು ಎಂದರೆ ಈ ಸಮುದಾಯದ ಮೊದಲನೇ ಶತಮಾನದವರು. ಅವರು ಪೈಗಂಬರ್(ಸ) ರವರ ಸಹಚರರಾದ ಮುಹಾಜಿರ್ ಹಾಗೂ ಅನ್ಸಾರ್‌ಗಳಾಗಿದ್ದಾರೆ.

ಅಲ್ಲಾಹನು ಹೇಳುತ್ತಾನೆ:

﴿وَٱلسَّٰبِقُونَ ٱلۡأَوَّلُونَ مِنَ ٱلۡمُهَٰجِرِينَ وَٱلۡأَنصَارِ وَٱلَّذِينَ ٱتَّبَعُوهُم
بِإِحۡسَٰنٖ رَّضِيَ ٱللَّهُ عَنۡهُمۡ وَرَضُواْ عَنۡهُ وَأَعَدَّ لَهُمۡ جَنَّٰتٖ تَجۡرِي
تَحۡتَهَا ٱلۡأَنۡهَٰرُ خَٰلِدِينَ فِيهَآ أَبَدٗاۚ ذَٰلِكَ ٱلۡفَوۡزُ ٱلۡعَظِيمُ ١٠٠﴾

“ಮುಹಾಜಿರ್ ಮತ್ತು ಅನ್ಸಾರ್‌ಗಳ ಪೈಕಿ ಮೊಟ್ಟಮೊದಲು ಮುಂದೆ ಬಂದವರು, ಮತ್ತು ಸತ್ಕಾರ್ಯವನ್ನು ಮಾಡುತ್ತಾ ಅವರನ್ನು ಅನುಸರಿಸಿದವರು ಯಾರೋ ಅವರ ಬಗ್ಗೆ ಅಲ್ಲಾಹನು ಸಂತೃಪ್ತನಾಗಿರುವನು ಮತ್ತು ಅವನ ಬಗ್ಗೆ ಅವರೂ

ಸಂತೃಪ್ತರಾಗಿರುವರು. ತಳಭಾಗದಿಂದ ನದಿಗಳು ಹರಿಯುವ ಸ್ವರ್ಗೋದ್ಯಾನಗಳನ್ನು ಅವನು ಅವರಿಗೋಸ್ಕರ ಸಿದ್ಧಗೊಳಿಸಿರುವನು. ಅವರು ಅದರಲ್ಲಿ ಶಾಶ್ವತವಾಗಿ ವಾಸಿಸುವರು. ಮಹಾ ಭಾಗ್ಯವೂ ಇದೇ ಆಗಿದೆ.” (ಅತ್ತೌಬಾ 100)

ಅಲ್ಲಾಹನು ಹೇಳುತ್ತಾನೆ:

﴿لِلْفُقَرَآءِ ٱلْمُهَـٰجِرِينَ ٱلَّذِينَ أُخْرِجُوا۟ مِن دِيَـٰرِهِمْ وَأَمْوَٰلِهِمْ يَبْتَغُونَ فَضْلًا
مِّنَ ٱللَّهِ وَرِضْوَٰنًا وَيَنصُرُونَ ٱللَّهَ وَرَسُولَهُۥٓ ۚ أُو۟لَـٰٓئِكَ هُمُ ٱلصَّـٰدِقُونَ ﴿٨﴾﴾

“(ಆ ಸಂಪತ್ತು) ತಮ್ಮ ಮನೆಗಳಿಂದ ಮತ್ತು ಸಂಪತ್ತುಗಳಿಂದ ಹೊರಗಟ್ಟಲಾದ ಮುಹಾಜಿರ್‌ಗಳಾದ ಬಡವರಿಗೆ (ಇರುವುದಾಗಿದೆ). ಅವರು ಅಲ್ಲಾಹನ ವತಿಯ ಅನುಗ್ರಹವನ್ನು ಮತ್ತು ಸಂತೃಪ್ತಿಯನ್ನು ಅರಸುತ್ತಿರುವವರು ಮತ್ತು ಅಲ್ಲಾಹನಿಗೆ ಹಾಗೂ ಸಂದೇಶವಾಹಕರಿಗೆ ಸಹಾಯ ಮಾಡುತ್ತಿರುವವರಾಗಿದ್ದಾರೆ. ಸತ್ಯಸಂಧರು ಅವರೇ ಆಗಿರುವರು.” (ಅಲ್-ಹಶ್ರ್ 8)

ಇದು ಮುಹಾಜಿರ್‌ಗಳ ಕುರಿತು ಅಲ್ಲಾಹನು ಹೇಳಿದ ವಚನಗಳಾಗಿವೆ. ಅನ್ಸಾರ್‌ಗಳ ಕುರಿತು ಅಲ್ಲಾಹನು ಹೇಳುತ್ತಾನೆ:

﴿وَٱلَّذِينَ تَبَوَّءُو ٱلدَّارَ وَٱلْإِيمَـٰنَ مِن قَبْلِهِمْ يُحِبُّونَ مَنْ هَاجَرَ إِلَيْهِمْ وَلَا
يَجِدُونَ فِى صُدُورِهِمْ حَاجَةً مِّمَّآ أُوتُوا۟ وَيُؤْثِرُونَ عَلَىٰٓ أَنفُسِهِمْ وَلَوْ كَانَ
بِهِمْ خَصَاصَةٌ ۚ وَمَن يُوقَ شُحَّ نَفْسِهِۦ فَأُو۟لَـٰٓئِكَ هُمُ ٱلْمُفْلِحُونَ ﴿٩﴾﴾

“ಅವರ (ಮುಹಾಜಿರ್’ಗಳ) ಆಗಮನಕ್ಕೆ ಮುಂಚಿತವಾಗಿ ವಾಸಸ್ಥಳವನ್ನು ಮತ್ತು ವಿಶ್ವಾಸವನ್ನು ಸಿದ್ಧಗೊಳಿಸಿದವರಿಗೂ (ಅನ್ಸಾರ್‌ಗಳಿಗೂ). ಸ್ವಂತ ಊರನ್ನು ಬಿಟ್ಟು ತಮ್ಮ ಬಳಿ ಬಂದವರನ್ನು ಅವರು ಪ್ರೀತಿಸುತ್ತಾರೆ. ಅವರಿಗೆ (ಮುಹಾಜಿರ್‌ಗಳಿಗೆ) ನೀಡಲಾದ ಸಂಪತ್ತಿನ ಕುರಿತು ಅವರು (ಅನ್ಸಾರ್‌ಗಳು) ತಮ್ಮ ಹೃದಯಗಳಲ್ಲಿ ಯಾವುದೇ ಅಗತ್ಯವನ್ನೂ ಕಾಣುವುದಿಲ್ಲ. ತಮಗೆ ಬಡತನವಿದ್ದರೂ ಸಹ ಸ್ವತಃ ತಮಗಿಂತಲೂ ಹೆಚ್ಚಾಗಿ ಅವರು ಇತರರಿಗೆ ಪ್ರಾಮುಖ್ಯತೆ ನೀಡುತ್ತಾರೆ. ತನ್ನ

ಮನಸ್ಸಿನ ಜಿಪುಣತನದಿಂದ ಯಾರನ್ನು ಕಾಪಾಡಲಾಗುತ್ತದೆಯೋ ಅವರೇ ಯಶಸ್ವಿಯಾದವರು.” (ಅಲ್-ಹಶ್ರ್ 9)

ಇವರ ನಂತರ ಬಂದವರ ಕುರಿತು ಅಲ್ಲಾಹನು ಹೇಳುತ್ತಾನೆ:

﴿وَٱلَّذِينَ جَآءُو مِنۢ بَعۡدِهِمۡ يَقُولُونَ رَبَّنَا ٱغۡفِرۡ لَنَا وَلِإِخۡوَٰنِنَا ٱلَّذِينَ سَبَقُونَا بِٱلۡإِيمَٰنِ وَلَا تَجۡعَلۡ فِي قُلُوبِنَا غِلّٗا لِّلَّذِينَ ءَامَنُواْ رَبَّنَآ إِنَّكَ رَءُوفٞ رَّحِيمٌ ١٠﴾

“ಅವರ ಬಳಿಕ ಬಂದವರಿಗೂ. ಅವರು ಹೇಳುವರು – ನಮ್ಮ ರಬ್ಬೇ! ನಮಗೂ ವಿಶ್ವಾಸದಲ್ಲಿ ನಮಗಿಂತ ಮುಂಚೆ ಗತಿಸಿಹೋದಂತಹ ನಮ್ಮ ಸಹೋದರರಿಗೂ ಕ್ಷಮಿಸು. ನಮ್ಮ ಹೃದಯಗಳಲ್ಲಿ ಸತ್ಯ ವಿಶ್ವಾಸಿಗಳೊಂದಿಗೆ ಯಾವುದೇ ವಿದ್ವೇಷವನ್ನು ಉಂಟುಮಾಡದಿರು. ನಮ್ಮ ರಬ್ಬೇ! ಖಂಡಿತವಾಗಿಯೂ ನೀನು ಅತ್ಯಧಿಕ ದಯೆಯುಳ್ಳವನು ಮತ್ತು ಅಪಾರ ಕರುಣೆಯುಳ್ಳವನಾಗಿರುವೆ.” (ಅಲ್-ಹಶ್ರ್ 10)

ಅವರ ಬಳಿಕ ಬಂದವರು ಹಾಗೂ ತಾಬಯೀನ್ ಹಾಗು ಅತ್ಬಾಉ ತ್ತಾಬಯೀನ್‌ಗಳಲ್ಲಿ ಸಹಾಬಾಗಳ ಶಿಷ್ಯರಾದವರು ಮತ್ತು ಅವರ ನಂತರ ಶ್ರೇಷ್ಠ ಶತಮಾನದಲ್ಲಿ ಬಂದವರು - ಇವರ ಕುರಿತು ಪೈಗಂಬರ್ (ಸ) ರವರು ಹೇಳುತ್ತಾರೆ:

«خَيْرُكُمْ قَرْنِي ثُمَّ الَّذِينَ يَلُونَهُمْ ثُمَّ الَّذِينَ يَلُونَهُمْ»

“ನಿಮ್ಮಲ್ಲಿ ಅತಿ ಶ್ರೇಷ್ಠರು ನನ್ನ ಶತಮಾನದವರು. ನಂತರ ಅವರ ಬಳಿಕ ಬರುವವರು. ನಂತರ ಅವರ ಬಳಿಕ ಬರುವವರು.” (ಬುಖಾರಿ)

ಹದೀಸ್ ವರದಿಗಾರರು ಹೇಳುತ್ತಾರೆ: “ಪೈಗಂಬರ್(ಸ) ರವರು ತಮ್ಮ ಕಾಲಾನಂತರದ ಎರಡು ಶತಮಾನಗಳನ್ನು ಪ್ರಸ್ತಾಪಿಸಿದರೋ ಅಥವಾ ಮೂರು ಶತಮಾನಗಳನ್ನು ಪ್ರಸ್ತಾಪಿಸಿದರೋ ಎಂದು ನನಗೆ ತಿಳಿದಿಲ್ಲ.”

ಈ ಶತಮಾನಗಳು ನಂತರದ ಶತಮಾನಗಳಿಗಿಂತ ಶ್ರೇಷ್ಠವಾಗಿವೆ. ಆದುದರಿಂದ

ಈ ಶತಮಾನಗಳನ್ನು القـرون المفضلـة (ಶ್ರೇಷ್ಠ ಶತಮಾನಗಳು) ಎಂದು ಕರೆಯ-ಲಾಗುತ್ತದೆ. ಇವರೇ ಈ ಸಮುದಾಯದ ಪೂರ್ವಜರು, ಪೈಗಂಬರ್(ಸ) ರವರು ತಮ್ಮ ವಚನದಲ್ಲಿ ಇವರನ್ನು ಹೀಗೆ ಹೊಗಳಿದ್ದಾರೆ:

«خَيْرُكُمْ قَرْنِي ثُمَّ الَّذِينَ يَلُونَهُمْ ثُمَّ الَّذِينَ يَلُونَهُمْ»

"ನಿಮ್ಮಲ್ಲಿ ಅತಿ ಶ್ರೇಷ್ಠರು ನನ್ನ ಶತಮಾನದವರು. ನಂತರ ಅವರ ಬಳಿಕ ಬರುವವರು. ನಂತರ ಅವರ ಬಳಿಕ ಬರುವವರು." (ಬುಖಾರಿ)

ಆದುದರಿಂದ ಅವರು ಈ ಸಮುದಾಯಕ್ಕೆ ಅತ್ಯುತ್ತಮ ಮಾದರಿಯಾಗಿದ್ದಾರೆ. ಅವರ ಕರ್ಮಮಾರ್ಗವು (ಮನ್‌ಹಜ್) ವಿಶ್ವಾಸದಲ್ಲಿ, ಪರಸ್ಪರ ವ್ಯವಹಾರಗಳಲ್ಲಿ ಮತ್ತು ಸ್ವಭಾವಗಳಲ್ಲಿ ಹಾಗೂ ಜೀವನದ ಎಲ್ಲ ಕ್ಷೇತ್ರಗಳಲ್ಲಿ ಅವರು ನಡೆದು ಬಂದ ಮಾರ್ಗವಾಗಿದೆ. ಅವರ ಈ ಮಾರ್ಗವು ಪೈಗಂಬರ್(ಸ) ರವರಿಗೆ ಹಾಗೂ ಪವಿತ್ರ ಕುರ್‌ಆನಿನ ಅವತೀರ್ಣಕ್ಕೆ ಸಮೀಪವಾಗಿರುವುದರಿಂದ ಪವಿತ್ರ ಕುರ್‌ಆನ್ ಮತ್ತು ಪ್ರವಾದಿಚರ್ಯೆಯಿಂದ ಅದನ್ನು ಆಯ್ದುಕೊಳ್ಳಲಾಗಿದೆ. ಆದುದರಿಂದ ಅವರು ಆ ಶತಮಾನಗಳ ಜನರಲ್ಲಿ ಅತ್ಯುತ್ತಮರಾಗಿದ್ದಾರೆ, ಅವರ ಕರ್ಮ ಮಾರ್ಗವು ಅತ್ಯುತ್ತಮ ಕರ್ಮ ಮಾರ್ಗವಾಗಿದೆ. ಆದುದರಿಂದ ಮುಸ್ಲಿಮರು ಅವರ ಕರ್ಮ-ಮಾರ್ಗವನ್ನು ಅರಿತುಕೊಳ್ಳಲು, ಆ ಕರ್ಮಮಾರ್ಗವನ್ನು ಬಲವಾಗಿ ಅನುಸರಿಸಲು ಉತ್ಸುಕರಾಗಿರಬೇಕು. ಏಕೆಂದರೆ ಅವರ ಕರ್ಮಮಾರ್ಗದ ಮೇಲೆ ನಡೆಯಲು ಅದರ ಬಗ್ಗೆ ತಿಳಿಯುವುದು, ಅದರ ಬಗ್ಗೆ ಜ್ಞಾನವನ್ನು ಪಡೆಯುವುದು ಮತ್ತು ಆ ಮಾರ್ಗವನ್ನು ಅನುಸರಿಸುವುದು ಕಡ್ಡಾಯವಾಗಿದೆ. ಆದುದರಿಂದ ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ:

﴿وَٱلسَّٰبِقُونَ ٱلْأَوَّلُونَ مِنَ ٱلْمُهَٰجِرِينَ
وَٱلْأَنصَارِ وَٱلَّذِينَ ٱتَّبَعُوهُم بِإِحْسَٰنٍ﴾

"ಮುಹಾಜಿರ್ ಮತ್ತು ಅನ್ಸಾರ್‌ಗಳ ಪೈಕಿ ಮೊಟ್ಟಮೊದಲು ಮುಂದೆ ಬಂದವರು, ಮತ್ತು ಸತ್ಕಾರ್ಯವನ್ನು ಮಾಡುತ್ತಾ ಅವರನ್ನು ಅನುಸರಿಸಿದವರು." (ಅತ್ತೌಬಾ

100)

ಅರ್ಥಾತ್ ಉತ್ತಮ ರೀತಿಯಲ್ಲಿ ಅವರ ಮಾತುಗಳನ್ನು ಹಾಗೂ ಕ್ರಿಯೆಗಳನ್ನು ಅನುಸರಿಸಿದವರು.

ಪೂರ್ವಜರ ಉತ್ತಮ ಅನುಚರರಾಗಲು ಅವರು ನಡೆದು ಬಂದ ದಾರಿ, ಅವರ ಸಿದ್ಧಾಂತ ಹಾಗೂ ಕರ್ಮಮಾರ್ಗವನ್ನು ಅರಿಯುವುದು ಅನಿವಾರ್ಯವಾಗಿದೆ. ಸಲಫ್ ಮತ್ತು ಸಲಫಿಯತ್ತಿನ ಕರ್ಮ ಮಾರ್ಗದ ಕುರಿತು ಅರಿಯದೆ ಕೇವಲ ಅದಕ್ಕೆ ಸಂಬಂಧವನ್ನು ಕಲ್ಪಿಸುವವನು ಶರೀಅತ್ತಿನ ಯಾವುದೇ ವಿಷಯವನ್ನು ಅರಿಯದವನಾಗಿದ್ದಾನೆ. ಕೆಲವೊಮ್ಮೆ ಇಂತಹ ವ್ಯಕ್ತಿ ತನಗೆ ಹಾಗೂ ಇತರರಿಗೆ ಹಾನಿಯನ್ನುಂಟು ಮಾಡುವವನಾಗಿದ್ದಾನೆ. ಆದುದರಿಂದಲೇ ಈ ಸಮುದಾಯವು ಸಜ್ಜನ ಪೂರ್ವಜರ ಕರ್ಮಮಾರ್ಗವನ್ನು ಅಧ್ಯಯನ ಮಾಡುತ್ತಾ ಹಾಗೂ ಪೀಳಿಗೆಯಿಂದ ಪೀಳಿಗೆಗೆ ಅದನ್ನು ವರ್ಗಾವಣೆ ಮಾಡುತ್ತಾ ಬಂದಿದೆ. ಈ ಕರ್ಮ ಮಾರ್ಗವನ್ನು ಮಸೀದಿಗಳಲ್ಲಿ ಇಸ್ಲಾಮೀ ಶಾಲೆಗಳಲ್ಲಿ ವಿಶ್ವವಿದ್ಯಾನಿಲಯಗಳಲ್ಲಿ ಹಾಗೂ ಶಿಕ್ಷಣಸಂಸ್ಥೆಗಳಲ್ಲಿ ಬೋಧಿಸಲಾಗುತ್ತಿದೆ,

ಪವಿತ್ರ ಕುರ್‌ಆನ್ ಹಾಗೂ ಪ್ರವಾದಿಚರ್ಯೆಯಿಂದ ಆಯ್ದುಕೊಳ್ಳಲಾದ ಪರಿಶುದ್ಧವಾದ ಸಜ್ಜನ ಪೂರ್ವಜರ ಈ ಮಾರ್ಗವನ್ನು ಅರಿಯಬೇಕೆಂದರೆ ಅದನ್ನು ಕಲಿಯುವುದು ಅವಶ್ಯಕ ಮತ್ತು ಅನಿವಾರ್ಯವಾಗಿದೆ.

ಪೈಗಂಬರ್ ಮುಹಮ್ಮದ್(ಸ) ರವರು ಈ ಸಮುದಾಯದಲ್ಲಿ ಭಿನ್ನಾಭಿಪ್ರಾಯಗಳು ಹೆಚ್ಚಾಗಿರುತ್ತವೆ ಎಂದು ತಿಳಿಸಿದ್ದಾರೆ. ಪೈಗಂಬರ್(ಸ) ರವರು ಹೇಳಿದರು:

«افْتَرَقَـــتِ الْيَهُودُ عَلَى إِحْدَى وَسَـــبْعِينَ فِرْقَـــةً، وَافْتَرَقَتِ النَّصَارَى عَلَى اثْنَتَيْنِ وَسَـــبْعِينَ وَسَـــتَفْتَرِقُ أُمَّتِي عَلَى ثَلَاثٍ وَسَـــبْعِينَ فِرْقَةً. كُلُّهَا فِي النَّـــارِ إِلَّا وَاحِدَةً.»

“ಯಹೂದಿಗಳು 71 ಗುಂಪುಗಳಾಗಿ ಬೇರ್ಪಟ್ಟರು. ಕ್ರೈಸ್ತರು 72 ಗುಂಪುಗಳಾಗಿ ಬೇರ್ಪಟ್ಟರು. ಈ ನನ್ನ ಸಮುದಾಯವು 73 ಗುಂಪುಗಳಾಗಿ ಬೇರ್ಪಡುತ್ತದೆ.

ಒಂದು ಗುಂಪಿನ ಹೊರತು ಎಲ್ಲರೂ ನರಕಕ್ಕೆ ಹೋಗುವರು.” ನರಕದಿಂದ ಮೋಕ್ಷ ಪಡೆಯುವ ಆ ಒಂದು ಗುಂಪು ಯಾವುದೆಂದು ಪೈಗಂಬರ್(ಸ)ರವರೊಡನೆ ಕೇಳಲಾಯಿತು. ಅವರು ಉತ್ತರಿಸಿದರು: “ನಾನು ಮತ್ತು ನನ್ನ ಸಂಗಡಿಗರು ಇಂದು ಯಾವ ಮಾರ್ಗದ ಮೇಲೆ ಇದ್ದೇವೆಯೋ ಆ ಮಾರ್ಗದ ಮೇಲೆ ಇರುವವರು.” (ತಿರ್ಮಿದಿ)

ಇದುವೇ ಪೈಗಂಬರ್(ಸ) ರವರ ಹಾಗೂ ಅವರ ಸಹಚರರ ಮಾರ್ಗ.

ಅಲ್ಲಾಹನು ಹೇಳುತ್ತಾನೆ:

﴿وَٱلَّذِينَ ٱتَّبَعُوهُم بِإِحۡسَٰنٖ﴾

“ಮತ್ತು ಸತ್ಕಾರ್ಯವನ್ನು ಮಾಡುತ್ತಾ ಅವರನ್ನು ಅನುಸರಿಸಿದವರು.” (ಅತ್ತೌಬಾ 100)

ಅರ್ಥಾತ್ ಅಲ್ಲಾಹನು ಸಜ್ಜನ ಪೂರ್ವಜರ ಮಾರ್ಗವನ್ನು ಕಲಿಯುವಂತೆ ಒತ್ತಿ ಹೇಳಿದ್ದಾನೆ. ಏಕೆಂದರೆ ಅದು ಯಶಸ್ಸಿನ ಮಾರ್ಗವಾಗಿದೆ.

ಪೈಗಂಬರ್(ಸ) ರವರು ಹೇಳಿದರು:

«كُلُّهَا فِي النَّارِ إِلَّا وَاحِدَةً.»

“ಒಂದು ಗುಂಪಿನ ಹೊರತು ಎಲ್ಲರೂ ನರಕಕ್ಕೆ ಹೋಗುವರು.”

ಆ ಒಂದು ಗುಂಪು ಯಶಸ್ಸು ಪಡೆಯುವ ಗುಂಪು. ಅದುವೇ ‘ಅಹ್ಲುಸ್ಸುನ್ನತಿ ವಲ್-ಜಮಾಅ’.

ಪೈಗಂಬರ್(ಸ) ರವರ ಮಾತು ಕೇವಲ ಒಂದು ಗುಂಪಿನ ಕುರಿತಾಗಿದೆ. ಅರ್ಥಾತ್ ಜನರು ಭಿನ್ನಾಭಿಪ್ರಾಯಕ್ಕೆ ಒಳಗಾದಾಗ, ಸಿದ್ಧಾಂತಗಳು, ಮಾರ್ಗಗಳು, ಗುಂಪುಗಳು, ತಂಡಗಳು ಹೆಚ್ಚಾದಾಗ ಅವರು ಸಜ್ಜನ ಪೂರ್ವಜರ ಮಾರ್ಗಗಳನ್ನು ಅನುಸರಿಸು-ತ್ತಾರೆ ಹಾಗೂ ಅದನ್ನು ಬಿಗಿಯಾಗಿ ಹಿಡಿದುಕೊಳ್ಳುತ್ತಾರೆ. ಸರ್ವಶಕ್ತನಾದ ತಮ್ಮ

ಪ್ರಭುವನ್ನು ಭೇಟಿಯಾಗುವವರೆಗೂ ಅವರು ಆ ಮಾರ್ಗದ ಮೇಲೆ ಅಚಲರಾಗಿ ನಿಲ್ಲುವವರಾಗಿದ್ದಾರೆ.

ಪೈಗಂಬರ್(ಸ) ರವರು ತಮ್ಮ ಸಹಚರರ ಬಗ್ಗೆ ತಮ್ಮ ಜೀವನದ ಕೊನೆ ಗಳಿಗೆಯಲ್ಲಿ ನಿರರ್ಗಳವಾದ ಹಾಗೂ ಪರಿಣಾಮಕಾರಿಯಾದ ಉಪದೇಶವನ್ನು ಮಾಡಿದರು. ಆ ಉಪದೇಶದಿಂದ ಪೈಗಂಬರ್(ಸ) ರವರ ಸಹಚರರ ಕಣ್ಣುಗಳು ತೇವಗೊಂಡವು. “ಓ ಪೈಗಂಬರರೇ! ಈ ಉಪದೇಶವು ವಿದಾಯ ಉಪದೇಶದಂತಿದೆ. ಆದ್ದರಿಂದ ತಾವು ನಮಗೆ ಏನಾದರೂ ನಿರ್ದೇಶನವನ್ನು ನೀಡಿರಿ” ಎಂದು ಸಹಚರರು ಹೇಳಿದರು. ಆಗ ಪೈಗಂಬರ್(ಸ) ರವರು ಹೇಳಿದರು:

«أُوصِيكُمْ بِتَقْوَى اللَّهِ وَالسَّمْعِ وَالطَّاعَةِ، وَإِنْ عَبْدًا حَبَشِيًّا، فَإِنَّهُ مَنْ يَعِشْ مِنْكُمْ بَعْدِي فَسَيَرَى اخْتِلَافًا كَثِيرًا، فَعَلَيْكُمْ بِسُنَّتِي وَسُنَّةِ الْخُلَفَاءِ الْمَهْدِيِّينَ الرَّاشِدِينَ. تَمَسَّكُوا بِهَا وَعَضُّوا عَلَيْهَا بِالنَّوَاجِذِ. وَإِيَّاكُمْ وَمُحْدَثَاتِ الْأُمُورِ. فَإِنَّ كُلَّ مُحْدَثَةٍ بِدْعَةٌ وَكُلَّ بِدْعَةٍ ضَلَالَةٌ، وَكُلَّ ضَلَالَةٍ فِي النَّارِ.»

“ನಾನು ನಿಮಗೆ ಅಲ್ಲಾಹನ ಭಯ-ಭಕ್ತಿ ಪಾಲಿಸುವ ಮತ್ತು ಅನುಸರಿಸುವ ವಸಿಯತ್(ಉಯಿಲು) ಮಾಡುತ್ತೇನೆ. ಮುಸ್ಲಿಮರ ವ್ಯವಹಾರಗಳ ಉಸ್ತುವಾರಿ ವಹಿಸಿಕೊಂಡಿರುವ ಆಡಳಿತಗಾರರ  ಮಾತುಗಳನ್ನು ಆಲಿಸಿರಿ ಮತ್ತು ಅವರನ್ನು ಅನುಸರಿಸಿರಿ. ಒಬ್ಬ ಗುಲಾಮನನ್ನು ನಿಮ್ಮ ಮೇಲೆ ಕಾರ್ಯನಿರ್ವಾಹಕನನ್ನಾಗಿ (ಮೇಲ್ವಿಚಾರಕನನ್ನಾಗಿ) ನೇಮಕ ಮಾಡಿದರೂ ನೀವು ಅವನ ಮಾತನ್ನು ಆಲಿಸಿರಿ ಮತ್ತು ಅವನನ್ನು ಅನುಸರಿಸಿರಿ. ಖಂಡಿತವಾಗಿಯೂ ನನ್ನ ಮರಣಾನಂತರ ನಿಮ್ಮಲ್ಲಿ ಯಾರಾದರೂ ಬದುಕಿದ್ದರೆ ಅವರು ಅನೇಕ ಭಿನ್ನಾಭಿಪ್ರಾಯಗಳನ್ನು ಕಾಣುವರು, ಆಗ ನೀವು ನನ್ನ ಚರ್ಯೆ ಹಾಗೂ ನನ್ನ ನಂತರ ಬರುವ ಸನ್ಮಾ-ರ್ಗದಲ್ಲಿರುವ ನನ್ನ ಪ್ರತಿನಿಧಿಗಳ ಚರ್ಯೆಯನ್ನು ಕಡ್ಡಾಯವಾಗಿ ಅನುಸರಿಸಿರಿ. ಅದನ್ನು ಅತಿ ಬಲವಾಗಿ ದವಡೆ ಹಲ್ಲುಗಳಿಂದ ಕಚ್ಚಿ ಹಿಡಿದುಕೊಳ್ಳಿ, ಧರ್ಮದಲ್ಲಿ ಹೊಸ ಆಚರಣೆಗಳನ್ನು ನಿರ್ಮಿಸುವುದರಿಂದ ದೂರವಿರಿ. ಏಕೆಂದರೆ ಧರ್ಮದಲ್ಲಿ

ನಿರ್ಮಿಸುವ ಪ್ರತಿಯೊಂದು ಹೊಸ ಆಚರಣೆಯು ಬಿದ್‌ಅತ್ (ನವೀನಾಚಾರ) ಆಗಿದೆ. ಪ್ರತಿಯೊಂದು ಬಿದ್‌ಅತ್ ಪಥಭ್ರಷ್ಟತೆಯಾಗಿದೆ ಮತ್ತು ಪ್ರತಿಯೊಂದು ಪಥಭ್ರಷ್ಟತೆಯು ನರಕಕ್ಕೆ ತಲುಪಿಸುತ್ತದೆ." (ಅಬೂದಾವೂದ್)

ಇದು ಮುಸ್ಲಿಮ್ ಸಮುದಾಯವು ತಮ್ಮ ಸಜ್ಜನ ಪೂರ್ವಜರ ಮಾರ್ಗದಲ್ಲಿ ನಡೆಯಬೇಕೆಂದು ಪೈಗಂಬರ್(ಸ) ರವರು ಮಾಡಿದ ವಸಿಯತ್ (ಉಯಿಲು) ಆಗಿದೆ. ಏಕೆಂದರೆ ಅದುವೇ ಮೋಕ್ಷದ ಮಾರ್ಗವಾಗಿದೆ. ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ:

﴿وَأَنَّ هَٰذَا صِرَٰطِي مُسۡتَقِيمٗا فَٱتَّبِعُوهُۖ وَلَا تَتَّبِعُواْ ٱلسُّبُلَ فَتَفَرَّقَ بِكُمۡ عَن سَبِيلِهِۦۚ ذَٰلِكُمۡ وَصَّىٰكُم بِهِۦ لَعَلَّكُمۡ تَتَّقُونَ ١٥٣﴾

"ಖಂಡಿತವಾಗಿಯೂ ನನ್ನ ನೇರವಾದ ಮಾರ್ಗವೂ ಇದೇ ಆಗಿದೆ. ಆದ್ದರಿಂದ ಇದನ್ನು ಅನುಸರಿಸಿರಿ. ಇತರ ಮಾರ್ಗಗಳನ್ನು ಅನುಸರಿಸಬೇಡಿ. ಅವು ನಿಮ್ಮನ್ನು ಅವನ (ಅಲ್ಲಾಹನ) ಮಾರ್ಗದಿಂದ ಬೇರ್ಪಡಿಸಿ ಬಿಡುವವು. ನೀವು ಭಯಭಕ್ತಿ ಪಾಲಿಸುವುದಕ್ಕಾಗಿ ಇವು ಅವನು ನಿಮಗೆ ನೀಡಿದ ಉಪದೇಶಗಳಾಗಿವೆ." (ಅಲ್-ಅನ್‌ಆಮ್ 153)

ಅರ್ಥಾತ್ ನೀವು ನರಕದಿಂದ ರಕ್ಷಣೆ ಪಡೆಯುವುದಕ್ಕಾಗಿ, ಪಥಭ್ರಷ್ಟತೆಯಿಂದ ಪಾರಾಗುವುದಕ್ಕಾಗಿ, ಪಥಭ್ರಷ್ಟ ಪಂಗಡಗಳಿಗೆ ವಿರುದ್ಧವಾಗಿ ಚಲಿಸುವುದಕ್ಕಾಗಿ ಮತ್ತು ನಿಮ್ಮ ಪೈಗಂಬರರೊಂದಿಗೆ, ಅವರ ಸಹಚರರೊಂದಿಗೆ ಹಾಗೂ ಅವರನ್ನು ಅನುಸರಿಸುವವರೊಂದಿಗೆ ಸೇರುವ ತನಕ ಸರಿಯಾದ ಮಾರ್ಗದಲ್ಲಿ ಚಲಿಸುವುದಕ್ಕಾಗಿ.

ವಿಶೇಷವಾಗಿ ಕೊನೆಯ ಕಾಲದಲ್ಲಿ ಯಾರು ಈ ಮಾರ್ಗವನ್ನು ಬಲವಾಗಿ ಹಿಡಿದುಕೊಳ್ಳುತ್ತಾರೋ ಅವರಿಗೆ ಜನರಿಂದ ಹಾಗೂ ವಿರೋಧಿಗಳಿಂದ ಕಿರುಕುಳ, ಖಂಡನೆ ಮತ್ತು ಬೆದರಿಕೆಗಳನ್ನು ಎದುರಿಸಬೇಕಾಗುತ್ತದೆ. ಈ ಸಂದರ್ಭಗಳಲ್ಲಿ ಸತ್ಯವಿಶ್ವಾಸಿಗಳಿಗೆ ತಾಳ್ಮೆ ಹಾಗೂ ಸಹನೆಯನ್ನು ಅಳವಡಿಸಿಕೊಳ್ಳುವುದು ಕಡ್ಡಾಯವಾಗಿದೆ. ಈ ನೇರ ಮಾರ್ಗದಿಂದ ಅವರನ್ನು ಪಥಭ್ರಷ್ಟಗೊಳಿಸಲಿಕ್ಕಾಗಿ ದಾರಿತಪ್ಪಿದ ತಂಡಗಳಿಂದ

ಹಾಗೂ ಪಥಭ್ರಷ್ಟಗೊಂಡ ಮಾರ್ಗಗಳಿಂದ ಬೆದರಿಕೆಗಳು, ಪ್ರಚೋದನೆಗಳು, ಆರೋಪಗಳನ್ನು ಅವರು ಎದುರಿಸಬೇಕಾಗುತ್ತದೆ. ತಾಳ್ಮೆ ಹಾಗೂ ಸಹನೆಯಿಂದಲ್ಲದೆ ಬೇರೆ ಯಾವುದರಿಂದಲೂ ಈ ಸಂಕಷ್ಟಗಳಿಂದ ಪಾರಾಗಲು ಸಾಧ್ಯವಿಲ್ಲ.

ಆದ್ದರಿಂದ ಪೈಗಂಬರ್(ಸ) ರವರು ಹೇಳಿದರು:

«بَدَأَ الْإِسْلَامُ غَرِيبًا وَسَيَعُودُ كَمَا بَدَأَ غَرِيبًا فَطُوبَى لِلْغُرَبَاءِ»

“ಇಸ್ಲಾಮ್ ಧರ್ಮವು ಅಪರಿಚಿತವಾಗಿ ಪ್ರಾರಂಭವಾಯಿತು. ಅದು ಹೇಗೆ ಪ್ರಾರಂಭವಾಯಿತೋ ಅದೇ ರೀತಿ ಅಪರಿಚಿತವಾಗಿಯೇ ಮರಳುತ್ತದೆ. ಅಪರಿಚಿತರಿಗೆ ಸುವಾರ್ತೆ ಇದೆ.” (ಮುಸ್ಲಿಂ)

ಅಪರಿಚಿತರು ಯಾರೆಂದು ಪೈಗಂಬರ್(ಸ) ರವರೊಂದಿಗೆ ಕೇಳಲಾಯಿತು. ಪೈಗಂಬರ್(ಸ) ರವರು ಹೇಳಿದರು:

«الَّذِينَ يُصْلِحُونَ إِذَا فَسَدَ النَّاسُ»

“ಜನರು ಪಥಭ್ರಷ್ಟತೆಗೆ ಒಳಗೊಂಡಾಗ ಅವರನ್ನು ಸುಧಾರಣೆ ಮಾಡುವವರು.” (ಮುಸ್ನದ್ ಅಹ್ಮದ್)

ಇನ್ನೊಂದು ವರದಿಯಲ್ಲಿ ಜನರು ಹಾಳು ಮಾಡಿರುವುದನ್ನು ಸುಧಾರಣೆ ಮಾಡುವವರು ಎಂದೂ ಸಹ ಇದೆ. (ತಿರ್ಮಿದಿ)

ಸಜ್ಜನ ಪೂರ್ವಜರ ಮಾರ್ಗವನ್ನು ಅನುಸರಿಸದವರು ಭೂಲೋಕದಲ್ಲಿ ಪಥಭ್ರಷ್ಟತೆಯಿಂದ ರಕ್ಷಣೆ ಹೊಂದಲಾರರು ಹಾಗೂ ಪರಲೋಕದಲ್ಲಿ ನರಕಯಾತನೆಯಿಂದ ಮೋಕ್ಷ ಪಡೆಯಲಾರರು. ಈ ಮಾರ್ಗವನ್ನು ಅನುಸರಿಸುವವರ ಕುರಿತು ಅಲ್ಲಾಹು ಹೇಳುತ್ತಾನೆ:

﴿وَمَن يُطِعِ ٱللَّهَ وَٱلرَّسُولَ فَأُوْلَٰٓئِكَ مَعَ ٱلَّذِينَ أَنۡعَمَ ٱللَّهُ عَلَيۡهِم مِّنَ

ٱلنَّبِيِّـۧنَ وَٱلصِّدِّيقِينَ وَٱلشُّهَدَآءِ وَٱلصَّٰلِحِينَۚ وَحَسُنَ أُوْلَٰٓئِكَ رَفِيقًا
﴿٦٩﴾ ذَٰلِكَ ٱلۡفَضۡلُ مِنَ ٱللَّهِۚ وَكَفَىٰ بِٱللَّهِ عَلِيمًا ﴿٧٠﴾

“ಯಾರು ಅಲ್ಲಾಹನನ್ನು ಮತ್ತು ಸಂದೇಶವಾಹಕರನ್ನು ಅನುಸರಿಸುವನೋ ಅಂತಹವರು ಅಲ್ಲಾಹು ಅನುಗ್ರಹಿಸಿದ ಪೈಗಂಬರರು, ಸತ್ಯಸಂಧರು, ಹುತಾತ್ಮರು, ಸಜ್ಜನರು, ಮುಂತಾದವರೊಂದಿಗೆ ಸೇರುವರು. ಅವರು ಎಷ್ಟು ಉತ್ತಮ ಸಂಗಾತಿಗಳು. ಅದು ಅಲ್ಲಾಹನ ವತಿಯ ಅನುಗ್ರಹವಾಗಿದೆ. ಎಲ್ಲವನ್ನೂ ಅರಿಯುವವನಾಗಿ ಅಲ್ಲಾಹು ಸಾಕು.” (ಅನ್ನಿಸಾ 69-70)

ಆದುದರಿಂದ ಕಡ್ಡಾಯ ಹಾಗೂ ಹೆಚ್ಚುವರಿ ನಮಾಝ್‌ಗಳ ಪ್ರತಿಯೊಂದು ರಕಅತ್ತಿನಲ್ಲಿ ಸೂರ ಫಾತಿಹಾ ಪಾರಾಯಣವನ್ನು ಅಲ್ಲಾಹು ನಮ್ಮ ಮೇಲೆ ಕಡ್ಡಾಯಗೊಳಿಸಿದ್ದಾನೆ.

ಈ ಸೂರಾಃ ಫಾತಿಹಾದ ಕೊನೆಯಲ್ಲಿ ಅಲ್ಲಾಹು ನಮಗೆ ಒಂದು ಮಹತ್ತರವಾದ ಪ್ರಾರ್ಥನೆಯನ್ನು ಕಲಿಸಿದ್ದಾನೆ. ಅಲ್ಲಾಹನು ಹೇಳಿದನು:

﴿ ٱهۡدِنَا ٱلصِّرَٰطَ ٱلۡمُسۡتَقِيمَ ﴿٦﴾ ﴾

“ನಮಗೆ ನೇರ ಮಾರ್ಗವನ್ನು ದಯಪಾಲಿಸು.” (ಅಲ್ ಫಾತಿಹ 6)

ಇಲ್ಲಿ ಪಥಭ್ರಷ್ಟಗೊಂಡ, ವಂಚಿಸುವ ಅನೇಕ ಮಾರ್ಗಗಳಿವೆ. ಆದ್ದರಿಂದ ನೀವು ಅಲ್ಲಾಹನಲ್ಲಿ ಈ ಎಲ್ಲಾ ದುರ್ಮಾರ್ಗಗಳಿಂದ ರಕ್ಷಿಸಲು ಹಾಗೂ ನೇರ ಮಾರ್ಗ ದಯಪಾಲಿಸಲು, ಅರ್ಥಾತ್ ನೇರ ಮಾರ್ಗವನ್ನು ತಿಳಿಸಿಕೊಡು ಹಾಗೂ ಆ ಮಾರ್ಗದ ಮೇಲೆ ಸ್ಥಿರವಾಗಿ ನೆಲೆಗೊಳಿಸು ಎಂದು ಪ್ರತಿಯೊಂದು ರಕಅತ್‌ನಲ್ಲಿ ಬೇಡಿಕೊಳ್ಳಬೇಕು. ಪ್ರಾರ್ಥನೆಯ ಅರ್ಥವನ್ನು ಒಮ್ಮೆ ಗಮನಿಸಿ –

﴿ ٱهۡدِنَا ٱلصِّرَٰطَ ٱلۡمُسۡتَقِيمَ ﴿٦﴾ ﴾

“ನೇರ ಮಾರ್ಗ.” (ಅಲ್-ಫಾತಿಹ 6)

ನೇರ ಮಾರ್ಗದಲ್ಲಿ ನಡೆಯುವವರು ಯಾರು? ಅಲ್ಲಾಹನ ಅನುಗ್ರಹಕ್ಕೆ ಪಾತ್ರರಾದವರು.

﴿ صِرَٰطَ ٱلَّذِينَ أَنۡعَمۡتَ عَلَيۡهِمۡ ﴾

“ನೀನು ಅನುಗ್ರಹಕ್ಕೆ ಪಾತ್ರರಾದವರ ಮಾರ್ಗ.” (ಅಲ್-ಫಾತಿಹ 7)

ಅಲ್ಲಾಹನ ಅನುಗ್ರಹಕ್ಕೆ ಪಾತ್ರರಾದವರು ಯಾರು?

﴿مِّنَ ٱلنَّبِيِّـۧنَ وَٱلصِّدِّيقِينَ وَٱلشُّهَدَآءِ وَٱلصَّٰلِحِينَۚ
وَحَسُنَ أُوْلَٰٓئِكَ رَفِيقًا ٦٩﴾

“ಅಲ್ಲಾಹು ಅನುಗ್ರಹಿಸಿದ ಪೈಗಂಬರರು, ಸತ್ಯಸಂಧರು, ಹುತಾತ್ಮರು, ಸಜ್ಜನರು, ಮುಂತಾದವರು. ಅವರು ಎಷ್ಟು ಉತ್ತಮ ಸಂಗಾತಿಗಳು.” (ಅನ್ನಿಸಾ 69)

ನೀವು ನನಗೆ ನೇರ ಮಾರ್ಗ ದಯಪಾಲಿಸು ಎಂದು ಅಲ್ಲಾಹನಲ್ಲಿ ಬೇಡಿಕೊಂಡಾಗ – “ಓ ರಬ್ಬೇ! ನನ್ನನ್ನು ದುರ್ಮಾರ್ಗ ಹಾಗೂ ಪಥಭ್ರಷ್ಟಗೊಂಡ ಮಾರ್ಗಗಳಿಂದ ರಕ್ಷಿಸು” ಎಂದು ಕೇಳಿಕೊಳ್ಳುವುದು ಅಗತ್ಯ.

﴿ صِرَٰطَ ٱلَّذِينَ أَنۡعَمۡتَ عَلَيۡهِمۡ غَيۡرِ ٱلۡمَغۡضُوبِ
عَلَيۡهِمۡ وَلَا ٱلضَّآلِّينَ ٧﴾

“ನೀನು ಅನುಗ್ರಹಿಸಿದವರ ಮಾರ್ಗ. ಕ್ರೋಧಕ್ಕೆ ಪಾತ್ರರಾದವರ ಮಾರ್ಗವಲ್ಲ.” (ಅಲ್-ಫಾತಿಹ 7)

﴿ٱلۡمَغۡضُوبِ عَلَيۡهِمۡ ﴾

“ಕ್ರೋಧಕ್ಕೆ ಪಾತ್ರರಾದವರು.” (ಅಲ್-ಫಾತಿಹ 7)

ಅಲ್ಲಾಹನ ಕೋಪಕ್ಕೆ ಪಾತ್ರರಾದವರು ಎಂದರೆ ಯಹೂದಿಗಳು. ಅವರಿಗೆ ಸತ್ಯ ತಿಳಿದಿದ್ದರೂ ಅವರು ಅದರ ಪ್ರಕಾರ ಸತ್ಕರ್ಮವೆಸಗಲಿಲ್ಲ. ಈ ಸಮುದಾಯದಲ್ಲಿ ಸತ್ಯವನ್ನು ಅರಿತು ಅದರ ಪ್ರಕಾರ ಸತ್ಕರ್ಮವೆಸಗದಿದ್ದರೆ ಅವರು ಸಹ ಯಹೂದಿಗಳ ಮಾರ್ಗದಲ್ಲಿ ನಡೆಯುವವರಾಗಿದ್ದಾರೆ. ಸತ್ಯವನ್ನು ಅರಿತು ಅದರ ಪ್ರಕಾರ ಸತ್ಕರ್ಮವೆಸಗದೇ ಇರುವವರ ಮೇಲೆ ಅಲ್ಲಾಹನು ಕೋಪಗೊಳ್ಳುತ್ತಾನೆ.

﴿وَلَا ٱلضَّآلِّينَ ٧﴾

“ಪಥಭ್ರಷ್ಟರಾದವರ ಮಾರ್ಗವೂ ಅಲ್ಲ.” (ಅಲ್-ಫಾತಿಹ 7)

ಈ ಸೂಕ್ತದಲ್ಲಿ ಪಥಭ್ರಷ್ಟರಾದವರು ಎಂದು ಹೇಳಲಾಗಿದೆ. ಅವರು ಯಾರೆಂದರೆ, ಅಲ್ಲಾಹನನ್ನು ಅಜ್ಞಾನ ಮತ್ತು ಪಥಭ್ರಷ್ಟತೆಯಿಂದ ಆರಾಧಿಸುವವರು. ಅವರು ಅಲ್ಲಾಹನನ್ನು ಆರಾಧಿಸುವುದು ಅಲ್ಲಾಹನ ಸಾಮೀಪ್ಯವನ್ನು ಪಡೆಯಲಿಕ್ಕಾಗಿ. ಆದರೆ ಅವರು ನೇರ ಮಾರ್ಗದಿಂದ ಬೇರ್ಪಟ್ಟ ಭಿನ್ನ ಮಾರ್ಗದಲ್ಲಿದ್ದಾರೆ. ಆ ಮಾರ್ಗದಲ್ಲಿ ಪವಿತ್ರ ಕುರ್‌ಆನ್ ಹಾಗೂ ಪೈಗಂಬರ್(ಸ) ಅವರ ಸುನ್ನತ್ತಿನ ಯಾವುದೇ ಪುರಾವೆಗಳಿಲ್ಲ. ಬದಲಾಗಿ ಆ ಮಾರ್ಗವು ನವೀನಾಚಾರಗಳಿಂದ ತುಂಬಿದೆ. ಪ್ರತಿಯೊಂದು ನವೀನಾಚಾರವು ಪಥಭ್ರಷ್ಟತೆಯಾಗಿದೆ. ಇದುವೇ ಕ್ರೈಸ್ತರ ಮಾರ್ಗ. ಅವರು ಸತ್ಯದ ಅರಿವಿಲ್ಲದೆ ಸತ್ಕರ್ಮವೆಸಗಲು ಪ್ರಾರಂಭಿಸಿದರು. ಆದರೆ ಪಥಭ್ರಷ್ಟಗೊಂಡರು. ಸತ್ಯವನ್ನು ಅರಿಯದೆ ಸತ್ಕರ್ಮ ಮಾಡುವವನು ಪಥಭ್ರಷ್ಟನಾಗಿದ್ದಾನೆ. ನೇರ ಮಾರ್ಗವನ್ನು ಕಳೆದುಕೊಳ್ಳುವವನಾಗಿದ್ದಾನೆ. ಅವನ ಕರ್ಮವು ವ್ಯರ್ಥವಾಗಿದೆ.

ಈ ಶ್ರೇಷ್ಠ ಪ್ರಾರ್ಥನೆಯನ್ನು ನಾವು ನಮ್ಮ ನಮಾಜಿನ ಪ್ರತಿಯೊಂದು ರಕಅತ್ತಿನಲ್ಲಿ ಪುನರಾವರ್ತಿಸುತ್ತೇವೆ. ಆದುದರಿಂದ ನಾವು ಅದರ ಅರ್ಥವನ್ನು ಗಮನಿಸಬೇಕಾಗಿದೆ, ಹಾಗೂ ಹೃದಯದ ಉಪಸ್ಥಿತಿಯೊಂದಿಗೆ ಅದರ ಅರ್ಥವನ್ನು ಅರ್ಥೈಸಿಕೊಳ್ಳುತ್ತಾ ಈ ಪ್ರಾರ್ಥನೆಯು ಅಲ್ಲಾಹನ ಬಳಿ ಸ್ವೀಕಾರವಾಗುವವರೆಗೆ ಅಲ್ಲಾಹನೊಂದಿಗೆ ಪ್ರಾರ್ಥಿಸಬೇಕಾಗಿದೆ. ಸೂರಃ ಫಾತಿಹಾದ ಕೊನೆಯಲ್ಲಿ ಆಮೀನ್ ಎಂದು ಹೇಳಬೇಕು. ಆಮೀನ್ ಎಂದರೆ – “ಓ ಅಲ್ಲಾಹನೇ ಪ್ರಾರ್ಥನೆಯನ್ನು ಸ್ವೀಕರಿಸು” ಎಂದರ್ಥ. ವಿವೇಕಿಗಳಿಗೆ ಇದೊಂದು ಮಹತ್ತರವಾದ

ಪ್ರಾರ್ಥನೆಯಾಗಿದೆ. ನಾವು ಈ ಹಿಂದೆ ಪ್ರಸ್ತಾಪಿಸಿದಂತೆ ಅನುಗ್ರಹಿಸಿದವರ ಮಾರ್ಗದಲ್ಲಿ ಯಾರು ನಡೆಯುತ್ತಾರೋ ಅವರಿಗೆ ಕಿರುಕುಳ ಕೊಡಲಾಗುತ್ತದೆ. ಪರೀಕ್ಷೆ ಮತ್ತು ಸಂಕಷ್ಟಕ್ಕೆ ಒಳಪಡಿಸಲಾಗುತ್ತದೆ. ಜನರು ಅವರನ್ನು ದಾರಿತಪ್ಪಿಸಲು ಪ್ರಯತ್ನಿಸುತ್ತಾರೆ. ಈ ಸಮಯದಲ್ಲಿ ಸಹನೆ ಹಾಗೂ ತಾಳ್ಮೆ ಅತ್ಯಗತ್ಯ. ಆದುದರಿಂದ ಕೊನೆಯ ಕಾಲದಲ್ಲಿ ಧರ್ಮದ ಪಾಶವನ್ನು ಬಿಗಿಯಾಗಿ ಹಿಡಿಯುವವನು ತನ್ನ ಕೈಯಲ್ಲಿ ಕೆಂಡವನ್ನು ಹಿಡಿಯುವವನಂತೆ ಆಗಿರುತ್ತಾನೆ ಎಂದು ಪೈಗಂಬರ್(ಸ) ರವರು ಹದೀಸಿನಲ್ಲಿ ಪ್ರಸ್ತಾಪಿಸಿದ್ದಾರೆ. ಏಕೆಂದರೆ ಅವನಿಗೆ ಜನರಿಂದ ಕಿರುಕುಳ ಹಾಗೂ ತೊಂದರೆಗಳನ್ನು ಎದುರಿಸಬೇಕಾಗುತ್ತದೆ. ಆದ್ದರಿಂದ ತಾಳ್ಮೆ ಅತ್ಯಗತ್ಯ. ಈ ಮಾರ್ಗವು ಹೂವಿನ ಹಾಸಿಗೆಯಲ್ಲ. ಬದಲಾಗಿ ಈ ಮಾರ್ಗದಲ್ಲಿ ಸಂಕಷ್ಟಗಳು ಹಾಗೂ ತೊಂದರೆಗಳು ತುಂಬಿವೆ. ಈ ಮಾರ್ಗದಲ್ಲಿ ಸಹನೆ ಮತ್ತು ತಾಳ್ಮೆವಹಿಸ-ಬೇಕು ಹಾಗೂ ಸ್ಥಿರವಾಗಿ ನೆಲೆ ನಿಲ್ಲಬೇಕಾಗಿದೆ. ನಿಮ್ಮ ರಬ್ಬನ್ನು ಭೇಟಿಯಾಗು-ವವರೆಗೂ ನೀವು ಈ ಮಾರ್ಗದಲ್ಲಿಯೇ ಇರಬೇಕು. ಖಂಡಿತವಾಗಿಯೂ ನೀವು ನರಕದಿಂದ ರಕ್ಷಣೆ ಹೊಂದುತ್ತೀರಿ ಹಾಗೂ ಭೂಲೋಕದಲ್ಲಿ ಪಥಭ್ರಷ್ಟತೆಯಿಂದ ರಕ್ಷಿಸಲ್ಪಡುತ್ತೀರಿ. ಇದುವೇ ನೈಜ ಮಾರ್ಗ. ಪರಲೋಕದಲ್ಲಿ ಜಯಶಾಲಿಯಾಗಲು ಈ ಮಾರ್ಗವಲ್ಲದೆ ಬೇರೆ ಮಾರ್ಗವಿಲ್ಲ.

ಇಂದು ಪತ್ರಿಕೆ ಮುಂತಾದ ಮಾಧ್ಯಮಗಳ ಮೂಲಕ ಜನರನ್ನು ಸಲಫಿ ಮಾರ್ಗದಿಂದ ವಿಮುಖರನ್ನಾಗಿ ಮಾಡಲಾಗುತ್ತಿದೆ. ಅಹ್ಲುಸುನ್ನತಿ ವಲ್ ಜಮಾಅದ (ನೈಜ ಸಲಫಿಗಳ) ಮಹತ್ವವನ್ನು ಜನರ ದೃಷ್ಟಿಯಲ್ಲಿ ತಗ್ಗಿಸಲಾಗುತ್ತಿದೆ. ಇವರ ಮೇಲೆ ತೀವ್ರವಾದಿಗಳು, ತಕ್ಫೀರಿಗಳು (ಕಾಫಿರ್ ಮಾಡುವವರು) ಇನ್ನಿತರೆ ಹಲವಾರು ಆರೋಪಗಳನ್ನು ಹೊರಿಸಲಾಗುತ್ತಿದೆ.

ಆದರೆ ಅದು ಯಾವುದೇ ರೀತಿಯಲ್ಲಿ ನಷ್ಟಗೊಳಿಸುವಂತಹ ವಿಷಯವಲ್ಲ. ಇದು ತಾಳ್ಮೆ ಮತ್ತು ಸಹನೆಯ ಶಕ್ತಿ ಹೊಂದಿರದ ವ್ಯಕ್ತಿಯ ಮೇಲೆ ಮಾತ್ರ ಪರಿಣಾಮ ಬೀರುತ್ತದೆ. ಅವರಲ್ಲಿ ಕೆಲವರು ಸಲಫ್‌ಗಳು ಯಾರು ಎಂದು ಕೇಳುತ್ತಾ, ಸಲಫ್ ಎಂದರೆ ಇತರ ಎಲ್ಲ ಪಂಥಗಳಂತೆ ಒಂದು ಪಂಥ, ಇತರ ಗುಂಪುಗಳಂತೆ ಒಂದು ಗುಂಪು, ಇತರ ಪಕ್ಷಗಳಂತೆ ಒಂದು ಪಕ್ಷ, ಅವರಲ್ಲೇನೂ ವಿಶೇಷತೆಯಿಲ್ಲ ಎಂದು ಹೇಳುತ್ತಾರೆ. ಈ ರೀತಿ ಹೇಳುತ್ತಾ ನಮ್ಮನ್ನು ಸಲಫ್‌ಗಳ ಮಾರ್ಗದಿಂದ ದೂರ ಮಾಡಬೇಕೆಂಬುದು ಅವರ ಬಯಕೆಯಾಗಿದೆ.

ಅವರಲ್ಲಿ ಕೆಲವರು ಹೇಳುತ್ತಾರೆ – ನಾವು ಸಲಫ್‌ಗಳ ಜ್ಞಾನವನ್ನೇ ಪಡೆಯಬೇಕು ಹಾಗೂ ಅವರ ಕರ್ಮಶಾಸ್ತ್ರವನ್ನೇ ಅನುಸರಿಸಬೇಕು ಎಂಬುದು ಕಡ್ಡಾಯವಲ್ಲ. ನಮ್ಮ ಮಾರ್ಗವನ್ನು ನಾವೇ ಕಂಡುಕೊಳ್ಳುತ್ತೇವೆ. ಇಸ್ಲಾಮಿ ವಿಧಿಗಳನ್ನು ನಾವೇ ಹೊಸದಾಗಿ ಸಂಶೋಧಿಸುತ್ತೇವೆ. ನಾವೇ ಹೊಸ ಕರ್ಮಶಾಸ್ತ್ರವನ್ನು ಕಂಡುಕೊಳ್ಳುತ್ತೇವೆ. ಸಲಫ್‌ಗಳ ಕರ್ಮಶಾಸ್ತ್ರವು ಹಳೆಯ ಕರ್ಮಶಾಸ್ತ್ರವಾಗಿದೆ. ಈ ಕಾಲಕ್ಕೆ ಯಾವುದು ಉಪಕಾರಿಯಾಗಿದೆಯೋ ಅವರ ಕಾಲಕ್ಕೂ ಅದೇ ಉಪಕಾರಿಯಾಗಿದೆ. ನಮ್ಮ ಕಾಲ ಬದಲಾಗಿದೆ. ಹೀಗೆ ಅವರು ಸಲಫ್‌ಗಳ ಕರ್ಮಶಾಸ್ತ್ರದ ಬಗ್ಗೆ ಅನಾಸಕ್ತಿಯನ್ನು ತೋರುತ್ತಾರೆ ಹಾಗೂ ಹೊಸ ಕರ್ಮಶಾಸ್ತ್ರದೆಡೆಗೆ ಜನರನ್ನು ಕರೆಯುತ್ತಾರೆ. ಪಥಭ್ರಷ್ಟ ವ್ಯಕ್ತಿಗಳಿಂದ ಹಾಗೂ ಲೇಖಕರಿಂದ ಪತ್ರಿಕೆ ಹಾಗೂ ಸಂಚಿಕೆಗಳಲ್ಲಿ ಇಂತಹ ವಿಷಯಗಳು ಹೆಚ್ಚಾಗಿವೆ. ಇದರಿಂದ ಅವರು ನಮ್ಮನ್ನು ಸಲಫ್‌ಗಳ ಕರ್ಮಮಾರ್ಗದಿಂದ ದೂರವಿಡಲು ಬಯಸುತ್ತಾರೆ, ಏಕೆಂದರೆ ನಾವು ಸಲಫಿಗಳ ಮಾರ್ಗವನ್ನು ಅರಿಯದೆ, ಅದನ್ನು ನಿರ್ಲಕ್ಷಿಸಿ ಅದನ್ನು ಕಲಿಯದೆ ಅದರ ಜ್ಞಾನ ಹಾಗೂ ಪರಿಜ್ಞಾನವಿಲ್ಲದೆ ಕೇವಲ ನಾವು ಸಲಫಿಗಳೆಂದು ಹೇಳಿದರೆ ಸಾಕಾಗಲಾರದು. ಇದೇ ಅವರು ಬಯಸುವುದು. ನಾವು ಸಲಫಿಗಳ ಜ್ಞಾನ, ಅವರ ಕರ್ಮಶಾಸ್ತ್ರ, ಅವರ ಮಾರ್ಗವನ್ನು ವರ್ಜಿಸಬೇಕೆಂದು ಹಾಗೂ ನಾವು ಹೊಸ ಕರ್ಮಮಾರ್ಗ ಕಂಡುಕೊಳ್ಳಬೇಕೆಂದು ಅವರು ಬಯಸುತ್ತಾರೆ. ಅವರು ಹೇಳುವ ಹಾಗೆ ಆ ಕರ್ಮಮಾರ್ಗವು ಈ ಕಾಲಕ್ಕೂ ಉಪಕಾರಿಯಾಗಿದೆ. ಆದರೆ ಇದು ಸುಳ್ಳು. ಇಸ್ಲಾಮಿನ ಕಾನೂನು-ನಿಯಮಾವಳಿಗಳು ಪ್ರತಿಯೊಂದು ಕಾಲ ಹಾಗೂ ಸ್ಥಳಕ್ಕೆ ಮಾನ್ಯವಾಗಿದೆ. ಸಲಫ್‌ಗಳ ಕರ್ಮ ಮಾರ್ಗವು ಪ್ರತಿಯೊಂದು ಕಾಲ ಹಾಗೂ ಸ್ಥಳಕ್ಕೆ ಮಾನ್ಯವಾಗಿದೆ. ಅದು ಅಲ್ಲಾಹನ ಕಡೆಯಿಂದ ಪ್ರಕಾಶವಾಗಿದೆ. ಈ ವಿಷಯದಲ್ಲಿ ವಂಚಿಸುವವರ ಹಾಗೂ ಪಥಭ್ರಷ್ಟಗೊಂಡವರ ಮಾತುಗಳು ನಿಮ್ಮನ್ನು ಸಲಫು ಸ್ಸಾಲಿಹೀನರ ಮಾರ್ಗದಿಂದ ದೂರ ಮಾಡದಿರಲಿ.

ಇಮಾಮ್ ಮಾಲಿಕ್(ರ) ಹೇಳುತ್ತಾರೆ: "ಈ ಸಮುದಾಯದ ಮೊದಲಿನವರು ಯಾವುದರಿಂದ ಸುಧಾರಣೆಯಾದರೋ ಅದರಿಂದಲ್ಲದೆ ಈ ಸಮುದಾಯದ ಕೊನೆಯವರು ಸುಧಾರಣೆಯಾಗಲಾರರು."

ಈ ಸಮುದಾಯದ ಮೊದಲಿನವರನ್ನು ಸುಧಾರಣೆ ಮಾಡಿರುವುದು ಏನು? ಅದು ಅಲ್ಲಾಹನ ಗ್ರಂಥ, ಪೈಗಂಬರ್(ಸ) ರವರ ಚರ್ಯೆ ಹಾಗೂ ಅನುಸರಣೆಯಾಗಿದೆ. ಪೈಗಂಬರ್(ಸ) ರವರ ಚರ್ಯೆಯನ್ನು ಅನುಸರಿಸುವುದರಿಂದಲೇ ಈ

ಸಮುದಾಯದ ಮೊದಲಿನವರು ಸುಧಾರಣೆಯಾಗಿದ್ದಾರೆ. ಈ ಸಮುದಾಯದ ಮೊದಲಿನವರು ಯಾವುದರಿಂದ ಸುಧಾರಣೆಯಾದರೋ ಅದರಿಂದ ಮಾತ್ರ ಈ ಸಮುದಾಯದ ಕೊನೆಯವರು ಸುಧಾರಣೆಯಾಗಲಿಕ್ಕೆ ಸಾಧ್ಯ. ಯಾರು ಯಶಸ್ಸನ್ನು ಬಯಸುತ್ತಾರೋ ಅವರಿಗೆ ಸಲಫ್‌ಗಳ ಮಾರ್ಗವನ್ನು ಅರಿಯುವುದು ಅದನ್ನು ಜೀವನದಲ್ಲಿ ಸರಿಯಾಗಿ ಅಳವಡಿಸಿಕೊಳ್ಳುವುದು ಹಾಗೂ ಅದರೆಡೆಗೆ ಜನರನ್ನು ಆಹ್ವಾನಿಸುವುದು ಕಡ್ಡಾಯವಾಗಿದೆ. ಅದುವೇ ಮೋಕ್ಷದ ಮಾರ್ಗ. ಅದು (ಸಲಫ್‌ಗಳ ಮಾರ್ಗ) ನೂಹ್(ಅ) ರ ಹಡಗಾಗಿದೆ. ಯಾರು ಅದರಲ್ಲಿ ಏರಿದನೋ ಅವನು ಪಾರಾದನು. ಅದನ್ನು ಏರದವನು ನಾಶವಾಗಿ ಪಥಭ್ರಷ್ಟತೆ-ಯಲ್ಲಿ ಮುಳುಗಿ ಬಿಟ್ಟನು. ನಮಗೆ ಸಲಫ್‌ಗಳ ಮಾರ್ಗದಿಂದ ಮಾತ್ರ ಮುಕ್ತಿಯಿದೆ. ಸಲಫ್‌ಗಳ ಮಾರ್ಗವನ್ನು ಅರಿಯಬೇಕೆಂದರೆ ಅದನ್ನು ಕಲಿಯಲೇಬೇಕು ಹಾಗೂ ಕಲಿಸಲೇಬೇಕು. ಅದರ ಅಧ್ಯಯನ ನಡೆಸಲೇಬೇಕು. ಇದರೊಂದಿಗೆ ನಾವು ಅಲ್ಲಾಹನಲ್ಲಿ ಈ ಪ್ರಾರ್ಥನೆಯ ಮೂಲಕ ಬೇಡಿಕೊಳ್ಳಬೇಕು. ಅಲ್ಲಾಹನು ಹೇಳಿದನು:

﴿ ٱهْدِنَا ٱلصِّرَٰطَ ٱلْمُسْتَقِيمَ ۝٦ صِرَٰطَ ٱلَّذِينَ أَنْعَمْتَ عَلَيْهِمْ ﴾

“ನಮಗೆ ನೇರ ಮಾರ್ಗವನ್ನು ದಯಪಾಲಿಸು, ನೀನು ಅನುಗ್ರಹಿಸಿದವರ ಮಾರ್ಗ” (ಅಲ್-ಫಾತಿಹ 6-7)

ಅಲ್ಲಾಹು ಆ ಮಾರ್ಗದ ತೌಫೀಕ್ ನೀಡಲಿ ಹಾಗೂ ಆ ಮಾರ್ಗದಲ್ಲಿ ನೆಲೆ ನಿಲ್ಲಿಸಲಿ ಎಂದು ನಾವು ಪ್ರಾರ್ಥಿಸಲೇಬೇಕಾಗಿದೆ. ಈ ವಿಷಯವು ಕೇವಲ ಒಂದು ವಾದವಲ್ಲ. ವಾದಗಳಿಗೆ ಸುಸ್ಪಷ್ಟ ಪುರಾವೆಗಳನ್ನು ಸಮರ್ಪಿಸದಿದ್ದರೆ ಅವರು ಕೇವಲ ವಾದಿಸುವವರು ಮಾತ್ರವಾಗುತ್ತಾರೆ. ಅದೇ ರೀತಿ ಈ ವಿಷಯವು ಕೇವಲ ಸಂಬಂಧ ಕಲ್ಪಿಸುವ ವಿಷಯವಲ್ಲ. ಅಲ್ಲಾಹನು ಹೇಳಿದನು:

﴿ وَٱلَّذِينَ ٱتَّبَعُوهُم بِإِحْسَٰنٍ ﴾

“ಮತ್ತು ಸತ್ಕಾರ್ಯವನ್ನು ಮಾಡುತ್ತಾ ಅವರನ್ನು ಅನುಸರಿಸಿದವರು.” (ಅತ್ತೌಬಾ 100)

ಅರ್ಥಾತ್ ಪೂರ್ಣ ಜ್ಞಾನದೊಂದಿಗೆ ಅನುಸರಿಸಿದವರು. ಸಲಫ್‌ಗಳ ಮಾರ್ಗವನ್ನು ಅರಿಯದೆ ಹಾಗೂ ಅದನ್ನು ಕಲಿಯದೆ ನಿಮಗೆ ಪೂರ್ಣ ಜ್ಞಾನದಿಂದ ಅವರನ್ನು ಅನುಸರಿಸಲು ಸಾಧ್ಯವಿಲ್ಲ. ಆ ಮಾರ್ಗವನ್ನು ಸಹನೆ ಹಾಗೂ ತಾಳ್ಮೆ ಇಲ್ಲದೆ ಜೀವನದಲ್ಲಿ ಸರಿಯಾಗಿ ಅಳವಡಿಸಿಕೊಳ್ಳಲು ಸಾಧ್ಯವಿಲ್ಲ. ಈ ಪಥಭ್ರಷ್ಟ ದಾವೆ ಹಾಗೂ ಕರೆಗಳಿಗೆ ಕಿವಿಗೊಡಬೇಡಿ. ಅವರು ನಿಮ್ಮನ್ನು ನೇರ ಮಾರ್ಗದಿಂದ ಪಥಭ್ರಷ್ಟರನ್ನಾಗಿ ಮಾಡಲು ಬಯಸುತ್ತಾರೆ. ಇದುವೇ ನೇರ ಹಾಗೂ ಮುಕ್ತಿಯ ಮಾರ್ಗ. ಪೈಗಂಬರ್(ಸ) ರವರು ಹೇಳಿದರು

«كُلُّهَا فِي النَّارِ إِلَّا وَاحِدَةً.»

"ಒಂದು ಗುಂಪಿನ ಹೊರತು ಎಲ್ಲಾ ಗುಂಪುಗಳು ನರಕದಲ್ಲಾಗಿವೆ."

ಓ ಪೈಗಂಬರರೆ ನರಕದಿಂದ ಪಾರಾಗುವವರು ಯಾರೆಂದು ಕೇಳಲಾದಾಗ ಅವರು ಹೀಗೆ ಉತ್ತರಿಸಿದರು:

«مَنْ كَانَ عَلَى مِثْلِ مَا أَنَا عَلَيْهِ الْيَوْمَ وَأَصْحَابِي»

"ನಾನು ಮತ್ತು ನನ್ನ ಸಹಾಬಾಗಳು ಇಂದು ಯಾವ ಮಾರ್ಗದಲ್ಲಿ ಇದ್ದೇವೆಯೋ ಆ ಮಾರ್ಗದಲ್ಲಿ ಇರುವವರು."

ಇದು ಸಲಫ್‌ಗಳ ಮಾರ್ಗವಾಗಿದೆ. ಇದುವೇ ಮುಕ್ತಿಯ ಮಾರ್ಗ. ಇದುವೇ ಸ್ವರ್ಗದೆಡೆಗೆ ಕರೆದೊಯ್ಯುವ ಮಾರ್ಗ. ಈ ಮಾರ್ಗದ ಹೊರತು ಯಾವ ಮಾರ್ಗವೂ ನೇರ ಮಾರ್ಗವಲ್ಲ. ಇದರ ಹೊರತಾಗಿರುವ ಎಲ್ಲಾ ಮಾರ್ಗಗಳು ಪಥಭ್ರಷ್ಟತೆಯ ಮಾರ್ಗಗಳಾಗಿವೆ.

﴿وَأَنَّ هَٰذَا صِرَٰطِي مُسۡتَقِيمٗا فَٱتَّبِعُوهُۖ وَلَا تَتَّبِعُواْ
ٱلسُّبُلَ فَتَفَرَّقَ بِكُمۡ عَن سَبِيلِهِۦۚ﴾

"ಇದುವೇ ನನ್ನ ನೇರ ಮಾರ್ಗ. ಈ ಮಾರ್ಗವನ್ನೇ ಅನುಸರಿಸಿರಿ. ಇದರ

ಹೊರತಾಗಿರುವ ಮಾರ್ಗಗಳನ್ನು ಅನುಸರಿಸಬೇಡಿ. ಅವು ನಿಮ್ಮನ್ನು ಅವನ ಮಾರ್ಗದಿಂದ ಬೇರ್ಪಡಿಸಿ ಬಿಡುವವು." (ಅಲ್-ಅನ್‌ಆಮ್ 153)

ಇದು ಅಲ್ಲಾಹನ ಮಾರ್ಗ. ಇತರೆ ಮಾರ್ಗಗಳು ಪಥಭ್ರಷ್ಟತೆಯ ಹಾಗೂ ವಕ್ರತೆಯ ಮಾರ್ಗಗಳಾಗಿವೆ. ಪ್ರತಿಯೊಂದರಲ್ಲೂ ಸೈತಾನನು ಕುಳಿತು ತನ್ನೆಡೆಗೆ ಆಹ್ವಾನಿಸುತ್ತಿದ್ದಾನೆ.

ಪೈಗಂಬರ್(ಸ) ರವರು ಪಥಭ್ರಷ್ಟತೆಯ ಕಡೆಗೆ ಆಹ್ವಾನಿಸುವವರ ಬಗ್ಗೆ ಎಚ್ಚರಿಕೆ ನೀಡಿದ್ದಾರೆ. ಜನರನ್ನು ಸಲಫ್‌ಗಳ ಮಾರ್ಗದಿಂದ ತಿರುಗಿಸಬೇಕೆಂದು ಅವರ ಬಯಸುತ್ತಾರೆ. ಅವರು ನರಕದೆಡೆಗೆ ಕರೆಯುವವರಾಗಿದ್ದಾರೆ. ಅವರನ್ನು ಅನು-ಸರಿಸುವವರನ್ನು ಅವರು ನರಕಕ್ಕೆ ತಲುಪಿಸಿ ಬಿಡುತ್ತಾರೆ. ನಾವು ಅವರ ಬಗ್ಗೆ ಅತಿಯಾಗಿ ಎಚ್ಚರಗೊಳ್ಳಬೇಕಾಗಿದೆ. ಕಾಲ ಕಳೆದಂತೆ (ನೇರ ಮಾರ್ಗವು) ಹೆಚ್ಚು ಹೆಚ್ಚು ಅಪರಿಚಿತವಾಗುತ್ತಾ ಹೋಗುತ್ತದೆ. ಕ್ಷೋಭೆಗಳು ಹೆಚ್ಚುತ್ತಾ ಹೋಗುತ್ತವೆ. ಆಗ ಮುಸ್ಲಿಮರಿಗೆ ಸಲಫ್‌ಗಳ ಮಾರ್ಗದ ಅವಶ್ಯಕತೆ ಇನ್ನೂ ಹೆಚ್ಚಾಗುತ್ತದೆ. ಈ ಕುರಿತು ವಿಶೇಷ ಗಮನಹರಿಸುವುದು ಅತ್ಯಗತ್ಯ.

ಈ ಪಥಭ್ರಷ್ಟಗೊಳಿಸುವವರಲ್ಲಿ ಕೆಲವರು ಹೇಳುತ್ತಾರೆ – "ಎಲ್ಲಾ ಜನರು ಮುಸ್ಲಿ-ಮರಾಗಿದ್ದಾರೆ." ಆದರೆ ಮುಸಲ್ಮಾನರಾಗಿರುವುದು ಯಾವ ಮಾರ್ಗದ ಮೇಲೆ? ಅವರು ಪೈಗಂಬರ್(ಸ) ಹಾಗೂ ಅವರ ಸಹಚರರ ಮಾರ್ಗದ ಮೇಲೆ ಮುಸ್ಲಿಮರಾ-ಗಿದ್ದಾರೆಯೇ? ಹೀಗಾದರೆ ಅದು ಸ್ವೀಕೃತವಾಗಿದೆ. ಅಥವಾ ಅವರು ಮುಸ್ಲಿಮರಾಗಿ-ರುವುದು ವಕ್ರಗೊಂಡ ಅವರಿವರ ಮಾರ್ಗದಲ್ಲಾಗಿದ್ದರೆ, ಆ ಮಾರ್ಗಗಳು ಅವರನ್ನು ನರಕದೊಳಗೆ ಕೊಂಡೊಯ್ಯುತ್ತವೆ. ಈ ವಿಷಯವು ಕೇವಲ ಇಸ್ಲಾಮಿನೊಂದಿಗೆ ಸಂಬಂಧ ಕಲ್ಪಿಸುವಂತಹದ್ದಲ್ಲ. ಬದಲಾಗಿ ಸಂಬಂಧವು ವಾಸ್ತವಿಕತೆಯೊಂದಿಗೆ ಸೇರಬೇಕಾಗಿದೆ. ಇದು ಕೇವಲ ಲಾಭದಾಯಕ ಜ್ಞಾನ ಪಡೆಯುವುದರಿಂದ ಮಾತ್ರ ಸಾಧ್ಯ.

ಆದಕಾರಣ ನೀವು ನೋಡಬಹುದು – ಇಸ್ಲಾಮಿನ ಅಧಿಕೃತ ವಿದ್ವಾಂಸರು ಅಖೀದ ಹಾಗೂ ಅದರ ಸಂಬಂಧಪಟ್ಟ ಅಧ್ಯಾಯಗಳ ಕುರಿತು ವಿಶೇಷ ಗಮನ ಹರಿ-ಸುತ್ತಿದ್ದರು. ಅವರು ಈ ವಿಷಯದಲ್ಲಿ ಸಲಫ್‌ಗಳ ಮಾರ್ಗವನ್ನು ಕಲಿಸಲಿಕ್ಕಾಗಿ ಸಂಕ್ಷಿಪ್ತ ಹಾಗೂ ವಿವರಣಾತ್ಮಕ ಪುಸ್ತಕಗಳನ್ನು ಬರೆದಿದ್ದಾರೆ. ನಾವು ಈ ವಿಷಯದ ಕುರಿತು ವಿಶೇಷ ಗಮನ ಹರಿಸಬೇಕಾಗಿದೆ. ವಿಶೇಷವಾಗಿ ಪಥಭ್ರಷ್ಟತೆ ಹಾಗೂ

ಅಂಧಕಾರಗಳ ನೆರಳುಗಳು ಹಾರಾಡುತ್ತಿರುವಾಗ. ಈ ಅಂಧಕಾರಗಳಲ್ಲಿ ಒಬ್ಬ ಮುಸ್ಲಿಮನಿಗೆ ಪ್ರಕಾಶದ ಅವಶ್ಯಕತೆ ಇದೆ. ಅದರ ಬೆಳಕಿನಲ್ಲಿ ಅವನು ಆ ಅಂಧಕಾರ ಹಾಗೂ ಅಜ್ಞಾನದಿಂದ ತನ್ನನ್ನು ರಕ್ಷಿಸಿಕೊಳ್ಳಬಹುದು.

ಇಂದು ನಾನು ಜ್ಞಾನ ಹಾಗೂ ಅರಿವು ಪಡೆದಿದ್ದೇನೆ ಎಂದು ದಾವೆ ಮಾಡುವವರು ಹೆಚ್ಚಾಗಿದ್ದಾರೆ. ಆದರೆ ಅವರು ಜ್ಞಾನವನ್ನು ಅದರ ಮೂಲ ಹಾಗೂ ಆಧಾರದಿಂದ ಪಡೆದಿರುವುದಿಲ್ಲ. ಬದಲಾಗಿ ಅವರಂತಹವರಿಂದ ಅಥವಾ ಕೆಲವು ಪುಸ್ತಕಗಳಿಂದ ಅಥವಾ ಸಂಪ್ರದಾಯ ಮುಂತಾದವುಗಳಿಂದ ಪಡೆದಿರುತ್ತಾರೆ. ಇವರು ಹೇಳಿದ ಹಾಗೆ ಇದು ಸತ್ಯ ಹಾಗೂ ನೇರ ಮಾರ್ಗದ ಕಡೆಗೆ ತಲುಪಿಸುವಂತಹದ್ದಲ್ಲ. ಆದರೆ ಸಲಫ್‌ಗಳ ಮಾರ್ಗದ ಜ್ಞಾನ ಪಡೆಯುವ ಹಾಗೂ ಅದನ್ನು ಅನುಸರಿಸುವ ರೀತಿ ಸರಿಯಾಗಿರಬೇಕು. ಈ ಮಾರ್ಗದಲ್ಲಿ ನಿಮಗೆ ಎದುರಾಗುವ ದೂಷಣೆ, ಅಪಮಾನ ಇತ್ಯಾದಿಗಳ ಬಗ್ಗೆ ತಾಳ್ಮೆ ವಹಿಸುವುದು ಅತ್ಯಗತ್ಯ. ಯಾರು ಸಲಫ್‌ಗಳ ಮಾರ್ಗವನ್ನು ಅನುಸರಿಸುತ್ತಾರೋ ಅವರು ಬೆದರಿಕೆ ಮತ್ತು ಅಪಮಾನಗಳನ್ನು ಎದುರಿಸುವುದು ಇಂದು ಸಾಮಾನ್ಯವಾಗಿದೆ.

ವಿರೋಧಿಗಳು ಹೇಳುತ್ತಾರೆ – “ಇವರು ಸಂಕುಚಿತ ಮನೋಭಾವದವರಾಗಿದ್ದಾರೆ.” ಇಂತಹ ಮಾತುಗಳು ಸತ್ಯ ಮಾರ್ಗದಿಂದ ಹಿಂಜರಿಯಲು ನಿಮ್ಮನ್ನು ಪ್ರೇರೇಪಿ-ಸದಿರಲಿ. ಈ ನೇರ ಮಾರ್ಗಕ್ಕೆ ಅಂಟಿಕೊಂಡಿರಿ. ಏಕೆಂದರೆ ಇದುವೇ ಮೋಕ್ಷದ ಮಾರ್ಗ. ಆದ್ದರಿಂದಲೇ ಪೈಗಂಬರ್(ಸ) ರವರು ಹೇಳಿದರು:

«فَإِنَّهُ مَنْ يَعِشْ مِنْكُمْ بَعْدِي فَسَيَرَى اخْتِلَافًا كَثِيرًا، فَعَلَيْكُمْ بِسُنَّتِي وَسُنَّةِ الْخُلَفَاءِ الْمَهْدِيِّينَ الرَّاشِدِينَ. تَمَسَّكُوا بِهَا وَعَضُّوا عَلَيْهَا بِالنَّوَاجِذِ.»

“ಖಂಡಿತವಾಗಿಯೂ ನಿಮ್ಮಲ್ಲಿ ಯಾರು ಜೀವಿಸುತ್ತಾರೋ ಅವರು ಅನೇಕ ಭಿನ್ನಾ-ಭಿಪ್ರಾಯಗಳನ್ನು ಕಾಣುವರು, ಆಗ ನೀವು ನನ್ನ ಚರ್ಯೆ ಹಾಗೂ ನನ್ನ ನಂತರ ಬರುವ ಸನ್ಮಾರ್ಗದಲ್ಲಿರುವ ನನ್ನ ಪ್ರತಿನಿಧಿಗಳ ಚರ್ಯೆಯನ್ನು ಕಡ್ಡಾಯವಾಗಿ ಆನುಸರಿಸಿರಿ. ಅದನ್ನು ಅತಿ ಬಲವಾಗಿ ದವಡೆ ಹಲ್ಲುಗಳಿಂದ ಕಚ್ಚಿ ಹಿಡಿದುಕೊಳ್ಳಿ,”

(ಅಬೂದಾವೂದ್)

ಭಿನ್ನಾಭಿಪ್ರಾಯಗಳ ಸಂದರ್ಭದಲ್ಲಿ ಮೋಕ್ಷ ನೀಡುವಂತಹದ್ದು ಪೈಗಂಬರ್(ಸ) ಹಾಗೂ ಅವರ ನಂತರ ಬಂದ ಸನ್ಮಾರ್ಗದಲ್ಲಿದ್ದ ಅವರ ಪ್ರತಿನಿಧಿಗಳ ಚರ್ಯೆ ಮಾತ್ರವಾಗಿದೆ. ಅದನ್ನು ಬಲವಾಗಿ ಅಳವಡಿಸಿಕೊಳ್ಳುವುದರಿಂದಲೇ ಇದು ಸಾಧ್ಯ. ಇದುವೇ ಮುಕ್ತಿಯ ಮಾರ್ಗ. ಇದುವೇ ಶಾಂತಿಯ ಮಾರ್ಗ. ಇದುವೇ ಸ್ವರ್ಗದ ಮಾರ್ಗ. ನಾವು ಸಲಫ್‌ಗಳ ಮಾರ್ಗದ ಮೇಲೆ ವಿಶೇಷ ಗಮನಹರಿಸಬೇಕಾಗಿದೆ. ಏಕೆಂದರೆ ಈ ಮಾರ್ಗದ ಮಹತ್ವವನ್ನು ಕಡಿಮೆ ಮಾಡುವವರು ಮತ್ತು ಅದನ್ನು ಕೆಟ್ಟದಾಗಿ ವರ್ಣಿಸುವವರು ನಮ್ಮನ್ನು ಆ ಮಾರ್ಗದಲ್ಲಿ ನಿರ್ಲಕ್ಷ್ಯ ಹಾಗೂ ಅನಾಸಕ್ತಿಯನ್ನು ತೋರುವವರನ್ನಾಗಿ ಮಾಡದಿರಲಿ. ಈ ಮಾತುಗಳು ನಮ್ಮ ಮನಸ್ಸಿನಲ್ಲಿ ಅದರ ಮಹತ್ವವನ್ನು ಕಡಿಮೆ ಮಾಡುವುದಿಲ್ಲ. ಬದಲಾಗಿ ಅದರ ಮಹತ್ವವನ್ನು ಹೆಚ್ಚಿಸುತ್ತವೆ. ಈ ಮಾರ್ಗದ ವೈರಿಗಳು ಈ ಮಾರ್ಗವೇ ಸತ್ಯವಾಗಿದೆ ಎಂಬ ಕಾರಣದಿಂದಲೇ ಅದರೊಂದಿಗೆ ಹೋರಾಡುತ್ತಿದ್ದಾರೆ. ಅವರು ಪಥಭ್ರಷ್ಟತೆಯನ್ನು ಬಯಸುವವರಾಗಿದ್ದಾರೆ.

ಅಲ್ಲಾಹನ ದಾಸರೇ! ಅವರಿಂದ ಎಚ್ಚರವಾಗಿರಿ. ಕೇವಲ ಸಂಬಂಧ ಕಲ್ಪಿಸುವುದಕ್ಕೆ ಮಾತ್ರ ಸೀಮಿತವಾಗದಿರಿ. ಜ್ಞಾನ ಪಡೆಯದೆ ಜ್ಞಾನವಿರುವವನಂತೆ ವರ್ತಿಸದಿರಿ. ಆ ನೇರ ಮಾರ್ಗದಲ್ಲಿ ನಿಂತಿರುವ ಹಾಗೂ ಆ ಮಾರ್ಗದೊಂದಿಗೆ ಪ್ರಖ್ಯಾತವಾಗಿರುವ ವಿದ್ವಾಂಸರಿಂದ ಮಾತ್ರ ಜ್ಞಾನವನ್ನು ಪಡೆಯಿರಿ. ಅಲ್ಲಾಹನು ನಮಗೆ ಎಚ್ಚರಿಕೆ ನೀಡಿರುವ ಈ ವಕ್ರ ಮಾರ್ಗಗಳಿಂದ ದೂರವಿರಿ. ಅಲ್ಲಾಹನು ಹೇಳುತ್ತಾನೆ:

﴿وَلَا تَتَّبِعُوا۟ ٱلسُّبُلَ فَتَفَرَّقَ بِكُمْ عَن سَبِيلِهِۦ ﴾

“ಬೇರೆ ಮಾರ್ಗಗಳನ್ನು ಅನುಸರಿಸಬೇಡಿ. ಅವು ನಿಮ್ಮನ್ನು ಅವನ (ಅಲ್ಲಾಹನ) ಮಾರ್ಗದಿಂದ ಬೇರ್ಪಡಿಸುವವು.” (ಅಲ್-ಅನ್‌ಆಮ್ 153)

ವಿಶೇಷವಾಗಿ ಈ ಕಾಲದಲ್ಲಿ ಕ್ಷೋಭೆಗಳು ಕಠಿಣವಾಗಿರುವಾಗ, ಪಥಭ್ರಷ್ಟತೆಯ ಕಡೆಗೆ ಕರೆಯುವವರ ಸಂಖ್ಯೆ ಹೆಚ್ಚಾಗಿರುವಾಗ, ಜನರಲ್ಲಿ ಕೆಡುಕನ್ನು ಹರಡುವ ಮಾಧ್ಯಮಗಳು ಹೆಚ್ಚಾಗಿರುವಾಗ, ಅಂದರೆ ಜನರನ್ನು ಅವರ ಮನೆಯಲ್ಲಿ, ಅವರ ಹಾಸಿಗೆಯಲ್ಲಿ ಅವರನ್ನು ಪಥಭ್ರಷ್ಟತೆಯೆಡೆಗೆ, ಅಶ್ಲೀಲತೆಯೆಡೆಗೆ, ನಿಷಿದ್ಧ

ಬಯಕೆಗಳೆಡೆಗೆ ಹಾಗೂ ವಕ್ರ ವಿಚಾರಧಾರೆಗಳ ಕಡೆಗೆ ಸೂಕ್ಷ್ಮವಾಗಿ ಕರೆಯುವ ಮಾಧ್ಯಮಗಳು. ಅವರು (ಪಥಭ್ರಷ್ಟಗೊಂಡವರು) ಇದನ್ನು ವಿಶಾಲ ದೃಷ್ಟಿಕೋನ, ವಿಶಾಲ ಸಂಸ್ಕೃತಿ, ವಿಶಾಲ ವಿಚಾರಧಾರೆ ಎಂದು ಕರೆಯುತ್ತಾರೆ. ಸಮಾಜದಿಂದ ಬೇರೆಯಾಗಿರಬೇಡ, ತೀವ್ರವಾದಿಯಾಗಬೇಡ ಎಂದು ಹೇಳುತ್ತಾರೆ. ಈ ಮಾತುಗಳು ಓರ್ವ ಮುಸಲ್ಮಾನನಿಗೆ ಸಲಫ್‌ಗಳ ಮಾರ್ಗದಿಂದ ಹಾಗೂ ಅವರ ಜ್ಞಾನದಿಂದ ವಂಚಿತರನ್ನಾಗಿ ಹಾಗೂ ಅನಾಸಕ್ತಿಯುಳ್ಳವರನ್ನಾಗಿ ಮಾಡದಿರಲಿ.

ಸಲಫ್‌ಗಳ ಮಾರ್ಗ ನಂತರದವರ ಮಾರ್ಗಕ್ಕಿಂತ ಸುರಕ್ಷಿತವೂ, ಅತಿ ಹೆಚ್ಚು ಜ್ಞಾನವುಳ್ಳದ್ದೂ ಪ್ರಬಲವಾದದ್ದೂ ಆಗಿದೆ. ಸಲಫ್‌ಗಳ ಜ್ಞಾನವು ಅತಿ ಪರಿಶುದ್ಧ ಹಾಗೂ ಅತಿ ನಿಖರವಾದ ಕುರ್‌ಆನ್ ಮತ್ತು ಪ್ರವಾದಿ ಚರ್ಯೆಯಿಂದ ಆಯ್ದುಕೊಂಡದ್ದಾಗಿದೆ. ನಂತರದವರ ಜ್ಞಾನದಲ್ಲಿ ಸೇರ್ಪಡೆಗಳಿವೆ. ಅದರಲ್ಲಿ ಹಲವಾರು ಕಲಬೆರೆಕೆಗಳಿವೆ. ಸಲಫ್‌ಗಳ ಜ್ಞಾನವು ಅತಿ ಶುದ್ಧ ಹಾಗೂ ಅತಿ ನಿಖರವಾಗಿದೆ. ಆದುದರಿಂದ ನೀವು ಸಲಫಿಗಳ ಗ್ರಂಥಗಳನ್ನು ನೋಡಿದಾಗ ಅವು ಎಷ್ಟು ಹಳೆಯದಾಗುತ್ತವೆಯೋ ಅಷ್ಟೇ ಪರಿಶುದ್ಧ ಹಾಗೂ ಕೃತಕ ವಿಷಯಗಳಿಂದ ದೂರವಾಗಿರುತ್ತದೆ. ಆದಕಾರಣ ಅಲ್ಲಾಮಾ ಇಬ್ನ್ ರಜಬ್(ರು) ರವರು 'ಫದ್‌ಲು ಇಲ್ಮಿಸ್ಸಲಫಿ ಅಲಾ ಇಮ್ಲಿಲ್ ಖಲಫ್' ಎಂಬ ಪ್ರಬಂಧದಲ್ಲಿ – "ಸಲಫ್‌ಗಳಿಗೆ ಮಾತು ಕಡಿಮೆಯಿತ್ತು. ಆದರೆ ಅವರ ಜ್ಞಾನವು ಹೇರಳವಾಗಿತ್ತು. ಆದರೆ ನಂತರದವರಿಗೆ ಮಾತು ಹೆಚ್ಚು ಇದೆ. ಅವರ ಜ್ಞಾನವು ಕಡಿಮೆಯಾಗಿದೆ" ಎಂದು ಹೇಳಿದ್ದಾರೆ.

ನಾವು ಈ ವಿಷಯದಲ್ಲಿ ಎಚ್ಚರವಾಗಿರಬೇಕಾಗಿದೆ. ಇದುವೇ ಸಲಫಿಗಳ ನೇರ ಮಾರ್ಗ. ಯಾವುದೇ ಕೃತಕ ಹಾಗೂ ಲೇಪನವಿಲ್ಲದ ನೇರ ಹಾಗೂ ದಿಟ್ಟವಾದ ಮಾರ್ಗದಿಂದ ಜ್ಞಾನವನ್ನು ಪಡೆದು ಆ ಮಾರ್ಗವನ್ನು ಅನುಸರಿಸಿ ಅದರಲ್ಲಿ ನೆಲೆನಿಲ್ಲುವ ಹೊರತು ನಮಗೆ ಮುಕ್ತಿ ಲಭಿಸಲಾರದು. ಆದರೆ ಈ ಮಾರ್ಗದಲ್ಲಿ ಸಲಫ್‌ಗಳಿಗೆ ಸೇರಿಸಿ ಹೇಳಲಾಗುವ ಕೆಲವು ಮಾತುಗಳಿವೆ. ಅವು ಸುಳ್ಳಾಗಿವೆ. ಅವು ಸಲಫ್‌ಗಳ ಮಾರ್ಗವಲ್ಲ. ನಾವು ಇವುಗಳ ಬಗ್ಗೆ ಎಚ್ಚರವಾಗಿರಬೇಕಾಗಿದೆ.

ಇವು ಈ ವಿಷಯದ ಕುರಿತು ಒಂದು ಸಂಕ್ಷಿಪ್ತ ವಿವರಣೆ ಮಾತ್ರವಾಗಿದೆ. ಇದಕ್ಕಿಂತ ಹೆಚ್ಚು ವಿವರಿಸುವುದು ಇಲ್ಲಿ ಸಾಧ್ಯವಿಲ್ಲ. ನಾನು ಅಲ್ಲಾಹನ ಆಜ್ಞೆಯ ಪ್ರಕಾರ ಜ್ಞಾಪಿಸುವ ಪ್ರಯತ್ನವನ್ನು ಮಾಡಿದ್ದೇನೆ.

﴿ وَذَكِّرۡ فَإِنَّ ٱلذِّكۡرَىٰ تَنفَعُ ٱلۡمُؤۡمِنِينَ ٥٥ ﴾

“ನೀವು ಉಪದೇಶಿಸಿರಿ. ಖಂಡಿತವಾಗಿಯೂ ಉಪದೇಶವು ಸತ್ಯವಿಶ್ವಾಸಿಗಳ ಪಾಲಿಗೆ ಲಾಭದಾಯಕವಾಗಿರುತ್ತದೆ.” (ಅದ್ದಾರಿಯಾತ್ 55)

﴿ فَذَكِّرۡ إِن نَّفَعَتِ ٱلذِّكۡرَىٰ ٩ سَيَذَّكَّرُ مَن يَخۡشَىٰ ١٠ ﴾

“ಉಪದೇಶದಿಂದ ಲಾಭವಿದ್ದಲ್ಲಿ ನೀವು ಉಪದೇಶಿಸಿರಿ. (ದೇವ) ಭಯ ಉಳ್ಳವನು ಉಪದೇಶವನ್ನು ಸ್ವೀಕರಿಸುವನು.” (ಅಲ್-ಅಲಾ 9-10)

ಅಲ್ಲಾಹನಲ್ಲಿ ಪ್ರಾರ್ಥಿಸುತ್ತೇನೆ; “ಓ ಅಲ್ಲಾಹನೇ ನಮ್ಮೆಲ್ಲರನ್ನೂ ಸತ್ಕಾರ್ಯವೆ-ಸಗುವ ಸತ್ಯ ಮಾರ್ಗದ ಮೇಲೆ ನಡೆದು ಅದರಲ್ಲಿ ಬರುವ ತೊಂದರೆಗಳನ್ನು ಸಹಿಸಿ ಆ ಮಾರ್ಗದಲ್ಲಿ ನೆಲೆನಿಲ್ಲುವ ತೌಫೀಕ್ ನೀಡು - ಆಮೀನ್”

For Free Distribution Only - Not for Sale
ಉಚಿತ ವಿತರಣೆಗಾಗಿ - ಮಾರಾಟ ಮಾಡಬಾರದು

Publishers

**CIS (Centre for Islamic Studies) Welfare Trust®**
First Floor, Masjid e Munawwara Complex
North Road, Cooke Town, Bengaluru - 560 084
+91 80 2546 6926 cisblr@yahoo.co.in www.ciswt.in